ದೋಸೆ ಎರೆದುಕೊಡುದು ಯಾರು?'

ಕಮಲಕ್ಕಂಗೆ ನಗೆ ಬಂತು. 'ಮತ್ತೆ, ಈಗ್ ಮಾತ್ರ ಸರಕಾರಕ್ ತಿಳಿಸ್ತೆ ಅಂದ್ರಿ, ಜೈಲಿಗೆ ಹಾಕತೊ ಹೇಳಿ ಪದೇ ಪದೇ ಹೆದರಸ್ತ್ರಿ'.

'ಎಲ್ಲಾದ್ರೂ ಇದ್ದ, ನಾ ಹಾಂಗ್ ಹೇಳುಲೆ ಸಾಧ್ಯವೇ ಇಲ್ಲೆ, ಈ ಮಾಸ್ಕನೊಳಗಿಂದ ನಾ ಹೇಳಿದ್ದು ರೂಪಾಂತರ ಆಗಿ ಕೇಳ್ತು ಅನ್ನಿಸ್ತು' – ಉಪಾಧ್ಯಾಯರು ಹೊಸದೇ ತರ್ಕ ಶುರು ಮಾಡಿದರು.

'ನೀವೂ ರಾಜಕಾರಣಿಗಳ ಹಾಂಗೇ ಆದ್ರಿ, ನೀವೇ ಆಗ ಹೇಳಿದ್ದು. ಈಗ – ಇಲ್ಲೆ, ಹಾಂಗೆ ಹೇಳಿನಿಲ್ಲೆ ಅಂಬ್ರಿ', ಕಮಲಕ್ಕ ಮತ್ತೆ ಚುಚ್ಚಿದರು. ಇಂಥ ಮಾತುಗಳಿಗೆ ಮಾಸ್ತರು ಹೆದರುವ ಪೈಕಿ ಅಲ್ಲ. ಏನೋ ಹೇಳುವರು, 'ಮುದ್ದಣ ಮನೋರಮೆಯರ ಸಲ್ಲಾಪ' ಮುಂದುವರಿಯುತ್ತ ಹೋಗುವುದು. ಈಗ ಕೆಲವು ದಿನಗಳಿಂದ ಅವರು ಟಿ.ವಿ. ನೋಡುವುದನ್ನು ಕಡಿಮೆ ಮಾಡಿದ್ದಾರೆ. ಮಾಧ್ಯಮಗಳು ಸಾವುಗಳ ಸಂಖ್ಯೆಯನ್ನು ಕ್ರಿಕೆಟ್ ಸ್ಕೋರ್ ಬಿತ್ತರಿಸಿದಂತೆ ಹೇಳುವ ವಿಧಾನ ಅವರಿಗೆ ಅಸಹ್ಯ ಹುಟ್ಟಿಸಿದೆ. ಸಂಜಯನು ಧೃತರಾಷ್ಟ್ರನಿಗೆ ಮಹಾಭಾರತ ಯುದ್ಧದ ಸಾವು ನೋವುಗಳ ವರದಿ ಕೊಟ್ಟಂತೆ ಪ್ರತಿಕ್ಷಣ ಈ ಸುದ್ದಿಸಂಸ್ಥೆಗಳು ಸಾವಿನ ಸಮಾಚಾರ ಸಾರುತ್ತಿವೆ. ಕಾಯಿಲೆಗೆ ಒಳಗಾದವರಿಗೆ ಬೆಡ್ ಸಿಕ್ಕಲಿಲ್ಲ, ಚಿಕಿತ್ಸೆ ಸಿಕ್ಕಲಿಲ್ಲ, ಡಾಕ್ಟರರೂ ಹೈರಾಣಾಗಿ ಹೋಗಿದ್ದಾರೆ, ಔಷಧ ಯಾವುದೆಂದು ಯಾರೂ ಅರಿಯರು ಮುಂತಾಗಿ ಕೇಳಿಸಿಕೊಳ್ಳುತ್ತಾ ಬೇಸರವಾಗುವುದು. ಅನಾಮಿಕರಾಗಿ ಮಣ್ಣಾಗಿ ಹೋಗುತ್ತಿರುವ ಅವರೆಲ್ಲ ನನ್ನ ಅಣ್ಣ ತಮ್ಮಂದಿರಂತೆಯೇ ಅಲ್ಲವೇ, ನನಗೂ ಹೀಗಾಗಿಬಿಡುತ್ತಿತ್ತೋ ಏನೋ ಅಲ್ಲವೇ... ಎಂಬ ಯೋಚನೆಗಳು ಸುಳಿಯತೊಡಗುವವು. ಎಲ್ಲವೂ ಅನಿಶ್ಚಿತವಾದ ಈ ಬದುಕಿನ ನಶ್ವರತೆ ಕ್ಷಣ ಕ್ಷಣಕ್ಕೂ ಅರಿವಿಗೆ ಬರತೊಡಗಿತು.

ಯಕ್ಷಪ್ರಶ್ನೆಯಲ್ಲಿ ಧರ್ಮರಾಯ ಕೊಟ್ಟ ಒಂದು ಉತ್ತರವನ್ನು ನೂರಾರು ಸಲ ಅವರು ತರಗತಿಗಳಲ್ಲಿ ಹೇಳಿದ್ದಿದೆ. 'ಎಲ್ಲಕ್ಕಿಂತ ಆಶ್ಚರ್ಯದ ಸಂಗತಿ ಯಾವುದು?' ಯಕ್ಷನ ಪ್ರಶ್ನೆ. 'ನಮ್ಮ ಸುತ್ತಲೂ ಜನರು ಸಾಯುತ್ತಲೇ ಇರುತ್ತಾರೆ. ಆದರೂ ನಾವು ಮಾತ್ರ ಚಿರಂಜೀವಿಗಳೆಂದೇ ತಿಳಿಯುತ್ತೇವೆ, ಇದೇ ಎಲ್ಲಕ್ಕಿಂತ ಅಚ್ಚರಿಯ ಸಂಗತಿ' ಎನ್ನುತ್ತಾನೆ ಯುಧಿಷ್ಠಿರ. ಸಾವನ್ನು ಮರೆತು ಬದುಕಿನಲ್ಲಿ ಪ್ರವೃತ್ತರಾಗುವಂತೆ ಮಾಡುವ ಏನೋ ಒಂದು ಸಂಗತಿ ಬಾಳಿನಲ್ಲಿದೆ. ಅದಿಲ್ಲದೆ ಹೋದರೆ ತೆಂಗಿನ ಮರಕ್ಕೆ ನೀರು ಹೊಯ್ಯುವುದೇಕೆ? 'ನಾಳೆ ಬೆಳಿಗ್ಗೆ ಆಸರಿಗೆ ಏನಾದರೂ ಸಿಹಿ, ಶಿರಾ ಆದರೂ ಅಡ್ಡಿ ಇಲ್ಲೆ , ಮಾಡು ಮಾರಾಯ್ತಿ' ಎಂದು ರಾತ್ರಿ ಮಲಗುವಾಗಲೇ ಕಮಲಕ್ಕನೊಡನೆ ಒಪ್ಪಂದಕ್ಕೆ ಬರುವುದೇಕೆ? ಈ ಬದುಕು ನಿಜ ಅನಿಸಿದಷ್ಟು ಆ ಸಾವು ಬೇಕೆನಿಸದು. ಆದರೆ ಕಟ್ಟ ಕಡೆಯದಾಗಿ ಅದೇ ನಿಜ ಅಲ್ಲವೇ? ಏನಿದ್ದರೂ ಮನಸ್ಸನ್ನು ಅಸ್ವಸ್ಥಗೊಳಿಸುವ ಮಾಧ್ಯಮಗಳ ವಾರ್ತೆ ಬೇಡವೇ ಬೇಡ ಎಂದು ಮಾಸ್ತರು ನಿಶ್ಚಯಿಸಿದರು.

ಬಸ್ಸು ಬರುವುದು ನಿಂತ ಮೇಲೆ ದಿನಪತ್ರಿಕೆಗಳು ಬರುತ್ತಿರಲಿಲ್ಲ. ಈಗ ಟಿ.ವಿ. ಸುದ್ದಿಗಳನ್ನೂ ನೋಡುವುದು ನಿಂತ ಮೇಲೆ ಮೂವತ್ತು ನಲವತ್ತು ವರ್ಷಗಳಷ್ಟು ಹಿಂದಕ್ಕೆ ಹೋಗಿ ಮುಟ್ಟಿದಂತಾಯಿತು. ಲೋಕದ ಯಾವ ಸಂಗತಿಗಳೂ ಈಗ ತನ್ನನ್ನು ಮುಟ್ಟಲಾರವು, ಕದಡಲಾರವು. ತಾನು ಹೆಚ್ಚು ಶುದ್ಧಗೊಳ್ಳುತ್ತಿರುವ ಹಾಗೆ ಅವರಿಗೆ ತೋರಿತು. ಕಮಲಕ್ಕ ದಿನವಿಡೀ ಹಿತ್ತಿಲಲ್ಲಿ ಏನೋ ಒಂದು ಕೆಲಸ ಹುಡುಕಿ ಹುಡುಕಿ ಮಾಡುವ ಪೈಕಿ. ಅವರಿಗೆ ರಾಜಕೀಯ, ಅಲ್ಲಿ ಹಾಗಾಯಿತು, ಇಲ್ಲಿ ಹೀಗಾಯಿತು ಮುಂತಾದ ವಾರ್ತಾ ಕಲಾಪಗಳಲ್ಲಿ ಯಾವತ್ತೂ ಏನೂ ಆಸಕ್ತಿ ಇರಲಿಲ್ಲ. ಮಾಸ್ತರರು ಮತ್ತು ಮನೆಗೆ ಬಂದ ಯಾರಾದರೂ ಹೊರಗಿನವರು ಆಡುತ್ತಿದ್ದ ಮಾತುಗಳಿಂದಷ್ಟೇ ಅವರಿಗೆ ಹೊರಜಗತ್ತಿನಲ್ಲಿ ಏನಾಗುತ್ತಿದೆ ಎಂದು ತಿಳಿಯುತ್ತಿದ್ದುದು. ಮತ್ತೆ, ಬೆಂಗಳೂರಿನಿಂದ ಬರುತ್ತಿದ್ದ ಅವರ ಮಕ್ಕಳ ಫೋನ್ ಕರೆಗಳಿಂದ ಒಂದಷ್ಟು ವಿಚಾರಗಳು ತಿಳಿಯುತ್ತಿದ್ದವು.

ಏನು ತಿಳಿಯುವುದೋ ಅದಷ್ಟನ್ನೇ ತಿಳಿದುಕೊಂಡು ಅವರ ಜೀವನದಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು. ಹೀಗಿರುತ್ತಿರಲು ಅವರದೇ ತೋಟದ ತೆಂಗಿನ ಮರದ ಹೆಡೆಯೊಂದು ಇಲೆಕ್ಟ್ರಿಕ್ ತಂತಿ ಮೇಲೆ ಬಿದ್ದು ದೊಡ್ಡ ಅವಘಡವೇ ಆಗಿಬಿಟ್ಟಿತು. ಟ್ರಾನ್ಸ್‌ಫಾರ್ಮರ್ ಹತ್ತಿರ ದೊಡ್ಡ ಸದ್ದು ಕೇಳಿಸಿತು, ಬೆಂಕಿಯೂ ಕಾಣಿಸಿಕೊಂಡಿತು ಎಂದು ರಸ್ತೆ ಕಡೆ ಇದ್ದವರು ಸುದ್ದಿ ತಂದರು. ಊರಿನ ವಿದ್ಯುತ್ ಸಂಪರ್ಕ ಕಟ್ಟಾಯಿತು. ಮೂರು ನಾಲ್ಕು ದಿನ ದುರಸ್ತಿಯವರು ಬರಲಾಗುವುದಿಲ್ಲವೆಂದು ಸುದ್ದಿ ಬಂತು. ಊರಿನ ಎಲ್ಲರ ಮೊಬೈಲ್ ಫೋನುಗಳು ಚಾರ್ಜ್ ಆಗದೆ ಚಿರನಿದ್ರೆಗೆ ಸಂದಂತಾದವು. ಇದೀಗ ಅವರು ಎಲ್ಲ ನಾಗರಿಕ ಸೌಲಭ್ಯಗಳನ್ನು ಕಳೆದುಕೊಂಡು ಅಕ್ಷರಶಃ ಶಿಲಾಯುಗಕ್ಕೆ ಸುಂಯೆಂದು ಅತಿವೇಗವಾಗಿ ಹೋಗಿಮುಟ್ಟಿದರು.

ನಡೆಯುತ್ತಿರುವುದೆಲ್ಲವನ್ನೂ ಮಾಸ್ತರರು ಕೌತುಕದಿಂದ ನೋಡುತ್ತಲೇ ಇದ್ದರು. ಸೂತಕದ ಮನೆಯ ವಿಷಾದಪೂರ್ಣ ಮೌನ ಎಲ್ಲೆಡೆ ತುಂಬಿಕೊಂಡಂತೆ ತೋರಿ ವಿಹ್ವಲಗೊಂಡರು. ಅದು ಸ್ವಲ್ಪ ಹೊತ್ತು, ಮರುಕ್ಷಣದಲ್ಲೇ 'ಇದು ಅಂತರಂಗದ ಪರಿಶೀಲನೆಗೆ ಸಿಕ್ಕ ಅಮೂಲ್ಯ ಅವಕಾಶ. ಇಂಥ ಏಕಾಂತದ ಸಂದರ್ಭಗಳಲ್ಲಿ ನಮ್ಮನ್ನು ನಾವೇ ಶೋಧಿಸಿಕೊಳ್ಳಬೇಕು' ಅಂದುಕೊಂಡರು.

ದಿನದಲ್ಲಿ ಮೂರು ನಾಲ್ಕು ಸಲವಾದರೂ ಅವರು ಅಘನಾಶಿನಿ ನದಿಯ ಕಡೆ ಸುಮ್ಮನೆ ಹೋಗಿ ಬರುವರು. ಇವತ್ತು ಮಧ್ಯಾಹ್ನ ನದಿ ಕಡೆ ನಡೆಯುತ್ತಿದ್ದಾಗ ಹಠಾತ್ತನೆ ಒಂದು ಸತ್ಯ ಅವರಿಗೆ ಗೋಚರಿಸಿಬಿಟ್ಟಿತು. ಹೀಗೆ ನಾವು 'ಸುಮ್ಮನೆ' ಮಾಡುವ ಕೆಲಸಗಳಲ್ಲೇ ನಮ್ಮ ಜೀವನದ ಕೆಲವು ರಹಸ್ಯಗಳಿವೆ. ಅವು ನಮ್ಮ ಮೂಲಪ್ರವೃತ್ತಿಯೊಡನೆ ತಳಕು ಹಾಕಿಕೊಂಡಿವೆ. ಈ ನದಿ, ಅದರ ಅಲೆಗಳ ಸದ್ದು, ಗಾಳಿ ಅಲೆಗಳೊಡನೆ ಆಟವಾಡುತ್ತ ನಡೆಸುವ ನಾಟ್ಯ, ಸೂರ್ಯನ ಬೆಳಕನ್ನು ಆ ಅಲೆಗಳು ಹೊಳೆಯಿಸುತ್ತ ವರ್ಣಮಾಲೆ ಸೃಷ್ಟಿಸುವುದು, ಬದುಕಿನ ಲೀಲೆಯನ್ನು ಅಭಿನಯಿಸುತ್ತಿರುವಂತೆ ಮುಳುಗೇಳುವ ಮೀನುಗಳು... ಹೀಗೇ ನೋಡುತ್ತಾ ಹೋದರೆ ಇಡೀ ನದಿಯು ಬಾನನ್ನು ಹೊಟ್ಟೆಯಲ್ಲಿಟ್ಟುಕೊಂಡು ಬಿಂಬಿಸಿ ಪ್ರತಿ ಆಕಾಶ ನಿರ್ಮಿಸಿರುವುದು ಕಂಡು ಸೋಜಿಗಗೊಳ್ಳುವರು. ಅವರು ಕಂಡ ನೆಳಲುಗಳಲ್ಲಿ ನದಿ ದಡದ ಅನೇಕ ಮನೆಗಳೂ, ಹಿತ್ತಿಲು ಮರಗಳೂ ಬೇರೆಯದೇ ವಿನ್ಯಾಸದಲ್ಲಿ ಕಂಡಿವೆ. ಇವನ್ನೆಲ್ಲ ಮಾಸ್ತರು ನೋಡುತ್ತಲೇ ಈ ಎಲ್ಲ ವರ್ಷಗಳನ್ನು ಕಳೆದಿದ್ದಾರೆ. ಯಾವತ್ತೂ ಯಾವುದೂ ಪುನರಾವರ್ತನೆ ಅನಿಸಿಲ್ಲ. ಪ್ರತಿ ಕ್ಷಣದ ಮುದವೂ ಬೇರೆಯದೇ ಅನುಭವ. ಹೀಗೂ ಹೇಳಬಹುದು: ಮಾಸ್ತರರು ಸಣ್ಣವರಿದ್ದಾಗಿನಿಂದ ನದಿ ಅವರನ್ನು ನೋಡಿದೆ. ಅವರು ಸಣ್ಣ ಚಡ್ಡಿ ಹಾಕಿಕೊಂಡು ಆಟವಾಡುತ್ತಾ ಪುಟ್ಟ ಕಲ್ಲುಗಳನ್ನು ತೂರಿ 'ಕಪ್ಪೆ ಹಾರಿಸುತ್ತಿದ್ದುದೂ' ನದಿಗೆ ನೆನಪಿದೆ. ಅವರ ಕುಮಟೆ ಪ್ರವಾಸಗಳೂ ಇಂಥವೇ. ಅಕ್ಕಪಕ್ಕದವರೊಡನೆ ಕುಶಲ ವಿಚಾರಿಸುತ್ತಲೇ ಅನೇಕ ಸಂದರ್ಭಗಳಲ್ಲಿ ಅವರು ನಿದ್ದೆಗೆ ಜಾರುವುದುಂಟು. ಅಂಥ ಸಂದರ್ಭಗಳಲ್ಲಿ ಅವರ ಜೀವನದಲ್ಲಿ ಈ ಬಸ್ಸೂ ಕೂಡ ಅವರಿಗೆ ಸ್ವಂತ ಮನೆಯದೇ ವಿಸ್ತರಣೆಯೇನೋ ಎನಿಸುವಂತಿದೆ. ಊರಗುಡ್ಡ, ಸಾಲು ಮರಗಳು, ಮೇಲೆ ಆಗಸದ ವಿನ್ಯಾಸ, ಕುಮಟೆಯಿಂದ ವಾಪಸು ಬರುವಾಗ ತಗ್ಗಿನಲ್ಲಿ ಕಾಣುವ ನದಿಯ ವಿವಿಧ ದೃಶ್ಯಾವಳಿಗಳು... ಇವೆಲ್ಲದರೊಡನೆ ಒಂದು ಅಗೋಚರ ಸಂಬಂಧ ಅವರ ಬಾಳಿಗಿದೆ. ಕಾಗಾಲ ತೇರು, ಬಾಡದ ತೇರು, ಊರಿನ ಸುಗ್ಗಿ ಹಬ್ಬ, ಬೂದಗಳುವು... ಅಲ್ಲೆಲ್ಲ ಸಮುದಾಯದ ಸಂಭ್ರಮದೊಡನೆ ಅವರ ಬದುಕಿನ ಸಂತಸದ ಕ್ಷಣಗಳು ಬೆಸೆದಿವೆ. ಈ ಎಲ್ಲ ಚಟುವಟಿಕೆಗಳಲ್ಲಿ ಯಾವುದೇ ಪುರುಷಾರ್ಥ ಇರಲಾರದು. ಆದರೂ 'ಸುಮ್ಮನೆ' ತೊಡಗಿಕೊಂಡ ಈ ಏಕಾಂತದ, ಲೋಕಾಂತದ ಕ್ಷಣಗಳಲ್ಲಿ ನಾನು ನನ್ನೊಳಗನ್ನು ಮುಟ್ಟಿರುತ್ತೇನೆ ಎನ್ನಿಸಿತು ಅವರಿಗೆ. ಅದೇನು ಎಂದು ಅವರು ಹೇಳಲಾರರು, ಆದರೆ ಅವರಿಗೆ ಅದರ ಅನುಭವ ಇದೆ.

ಆ ರಾತ್ರಿ ತಮ್ಮ ಹಳೆಯ ನೆನಪುಗಳನ್ನು ಹೊತ್ತ ಸೂಟ್‌ಕೇಸ್ ಕೆಳಗಿಳಿಸಿ ಹಾಸಿಗೆಯ ಪಕ್ಕಕ್ಕೆ ಇಟ್ಟುಕೊಂಡರು. 'ಮೊದಲೇ ಕರೆಂಟಿಲ್ಲ. ಈ ಲಾಟೀನು ದೀಪದಲ್ಲಿ ಇದೇನು ಹೊಸ ಆಟ ಶುರುಮಾಡಿಕೊಂಡಿದ್ದೀರಿ?' ಎಂದು ಕಮಲಕ್ಕ ಆಕ್ಷೇಪ ಎತ್ತಿದರು. 'ಹೊಸ ಆಟ ಅಲ್ಲ ಕಮಲಾ, ಹಳೆಯ ದಿನಗಳಿಗೆ ಹೋಗಲು ಹಳೆಯ ದೀಪದ ಬೆಳಕೇ ಬೇಕು' ಎಂದರು. 'ನೀವೇನು ಹೇಳುತ್ತಿದ್ದೀರೋ ಭಗವಂತನೇ ಬಲ್ಲ' ಎಂದು ಕಮಲಕ್ಕ ಹೆಪ್ಪು ಹಾಕಲು ಅಡುಗೆ ಮನೆಗೆ ನಡೆದರು.

ಮಾಸ್ತರರು ಟಿ.ಸಿ.ಎಚ್. ಮಾಡುತ್ತಿದ್ದಾಗಿನ ಫೋಟೊ ಸಿಕ್ಕಿತು. 'ಈ ಚಿತ್ರದಲ್ಲಿ ನನ್ನನ್ನು ಕಂಡು ಹಿಡಿ ನೋಡೋಣ' ಎಂದು ಮಾಸ್ತರರು ಅಡುಗೆ ಮನೆಯಲ್ಲಿದ್ದ ಕಮಲಕ್ಕನಿಗೆ ಬಹಿರಂಗ ಆಹ್ವಾನ ನೀಡಿದರು. ಸರಿ, ಕಮಲಕ್ಕನೂ ಇವರ